**ಓ.ಎಸ್.ನಂಃ 132/2018**

**ಪಿಡಬ್ಲ್ಯೂ-1**

**<u>ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 06.02.2026 ರಂದು ಪ್ರಮಾಣೀಕರಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು: ಪ್ರತಿವಾದಿ 2 ಮತ್ತು 3 ರವರ ವಾರಸುದಾರವರ ಪರ ವಕೀಲರಿಂದಃ</u>**

ಇಂದು ನ್ಯಾಯಾಲಯಕ್ಕೆ ನಾನೊಬ್ಬಳೆ ಸರ್ಕಾರಿ ಬಸ್ಸಿನಲ್ಲಿ ಬಂದಿದ್ದೇನೆ.

**ಪ್ರಶ್ನೆಃ ಬಸ್ಸಿನ ಕಂಡಕ್ಟರ್ ನಿಮಗೆ ಟಿಕೇಟ್ ನೀಡಿ ಹಣ ಪಡೆದರಾ?**

*ಈ ನ್ಯಾಯಾಲಯದಲ್ಲಿ ಗಮನಿಸುವುದೆನೆಂದರೆ ಈ ದಾವೆಯಲ್ಲಿ ಪ್ರಾಸಾ-1 ಯಾವ ವಾಹನದ ಮೂಲಕ ನ್ಯಾಯಾಲಯಕ್ಕೆ ಬಂದರು, ಬಸ್ಸಿನ ಕಂಡಕ್ಟರ್ ಟಿಕೇಟ್ ಕೊಟ್ಟಿರುತ್ತಾರಾ ಮತ್ತು ಅದಕ್ಕೆ ಫ್ರಾಸಾ-1 ಹಣ ಪಾವತಿ ಮಾಡಿರುತ್ತಾರಾ ಎಂಬ ಅಂಶಗಳು ಸಮಂಜಸವಾಗಿರುವುದಿಲ್ಲ ಕಾರಣ ಮೇಲ್ಕಂಡ ಪ್ರಶ್ನೆಗಳನ್ನು ಅಸಮಂಜಸ ಎಂದು ತೆಗೆದುಕೊಳ್ಳಲಾಗಿದೆ.*

ನನ್ನ ಬಳಿ ಆಧಾರ್ ಕಾರ್ಡ್ ಇಲ್ಲ. ನಾನು ಕೆಲಸಕ್ಕೆ ಹೋಗಿದ್ದಾಗ ಅದನ್ನು ಕಳೆದುಕೊಂಡಿರುತ್ತೇನೆ. ಆಧಾರ್ ಕಾರ್ಡ್ ನ್ನು ಪುನಹ ಮಾಡಿಸಲು ಪ್ರಯತ್ನ ಮಾಡಿಲ್ಲ. ನಾನು ಕಳೆದ ಚುನಾವಣೆಯಲ್ಲಿ ಮತ ಚಲಾಯಿಸಿಲ್ಲ. ನಾನು ಪಡಿತರ ಚೀಟಿಯಿಂದ ಪಡಿತರ ಪಡೆಯುತ್ತಿಲ್ಲಾ. ನನ್ನ ಫೋಟೋವನ್ನು ನಾನು ಗುರುತಿಸಲು ಆಗುವುದಿಲ್ಲ. ಸಾಕ್ಷಿಗೆ ಚುನಾವಣಾ ಗುರುತಿನ ಚೀಟಿ ಮತ್ತು ಪಡಿತರ ಚೀಟಿಯನ್ನು ತೋರಿಸಿ ಅವುಗಳಲ್ಲಿ ಕಾಣುವ ಭಾವಚಿತ್ರ ನಿಮ್ಮದ ಎಂದರೆ ಸಾಕ್ಷಿ ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ಮುಂದುವರೆದು ಸದರಿ ಭಾವಚಿತ್ರಗಳು ನನ್ನದಲ್ಲ ಎಂದು ನುಡಿಯುತ್ತಾರೆ.

ನನ್ನ ಬಳಿ ಆಧಾರ್ ಕಾರ್ಡ್ ಇದ್ದು ಅದನ್ನು ಹಾಜರುಪಡಿಸಿದರೆ ನನ್ನ ಗಂಡನ ಹೆಸರು ಗೊತ್ತಾಗುತ್ತದೆ ಎಂದು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಈಗ ತೋರಿಸಿದ ಪಡಿತರ ಚೀಟಿ ಮತ್ತು ಚುನಾವಣಾ ಗುರುತಿನ ಚೀಟಿಯಲ್ಲಿ ಇರುವ ಭಾವಚಿತ್ರಗಳು ನನ್ನವು ಎಂದರೆ ಸರಿಯಲ್ಲ. ಸದರಿ ದಾಖಲೆಗಳು ನನಗೆ ಸಂಬಂಧ,ಪಟ್ಟಿರುತ್ತವೆ ಎಂದರೆ ಸರಿಯಲ್ಲ. ಸದರಿ

ದಾಖಲೆಗಳಲ್ಲಿ ನನ್ನ ಗಂಡನ ಹೆಸರು ಶಂಕರದೇವರು ಎಂದು ಬರೆದಿರುವ ಕಾರಣ ಆ ದಾಖಲೆಗಳನ್ನು ನಾನು ಒಪ್ಪುತ್ತಿಲ್ಲಾ ಎಂದರೆ ಸರಿಯಲ್ಲ. ಶಂಕರದೇವರು ನ್ನು ಮರಿದೇವರು ಎಂದು ಸಹ ಕರೆಯುತ್ತಿದ್ದರು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಗಿರೀಶ ಆರ್.ಬಿ)**

ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಗುಂಡ್ಲುಪೇಟೆ